**ದಿಃ06.03.2025ರ ಆದೇಶದ ಪ್ರಕಾರ ಸಾಕ್ಷಿಯನ್ನು ಮುಂದುವರಿದ ಪಾಟೀ ಸವಾಲಿಗಾಗಿ ಪುನಃ ಕರೆಸಲಾಯಿತು.** ಸಾಕ್ಷಿಗೆ ದಿಃ 24.06.2025 ರಂದು ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ 1, 2, 3 ಮತ್ತು 5 ನೇ ಆರೋಪಿತರ ಪರ ಶ್ರೀಮತಿ ಎಸ್ ಪಿ ವಕೀಲರಿಂದಃ**

4. ಚಾಸಾ-1 ಮತ್ತು 2 ಇವರು ಸುಮಾರು 20 ವರ್ಷಗಳಿಂದ ಪರಿಚಯ. ಆರೋಪಿತರ ಪರಿಚಯ ಇಲ್ಲ ಆದರೆ ಅವರನ್ನು ಹತ್ತು ವರ್ಷಗಳಿಂದ ನಾನು ಕೆಲಸ ಮಾಡುವ ಸ್ಥಳದಲ್ಲಿ ನೋಡಿರುತ್ತೇನೆ. ಘಟನೆಗಿಂತ ಮೊದಲು ನಾನು ಆರೋಪಿತರನ್ನು ನೋಡಿರುತ್ತೇನೆ. ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಗುರುತಿನ ಚೀಟಿ ಹಾಗೂ ಮುಂತಾದ ದಾಖಲಾತಿಗಳನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. ನಾನು ಘಟನೆಯ ದಿನದಂದು ಶ್ರೀರಾಮನಹಳ್ಳಿಯಲ್ಲಿರುವ ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯ ಮಾಲೀಕತ್ವದ ಸರ್ವೆ ನಂಬರ್ 45/2 ರಲ್ಲಿ ಸೆಕ್ಯೂರಿಟಿ ಆಗಿ ಕೆಲಸ ಮಾಡುತ್ತಿದ್ದೆನು. ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯ ಮೂಲ ಕಛೇರಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಚಾಸಾ-1 ಮತ್ತು ಚಾಸಾ-5 ರವರು ನನಗೆ ಸದರಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯಲ್ಲಿ ಕೆಲಸ ವಹಿಸಿದ್ದರು. ಸದರಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯಲ್ಲಿ ಕೆಲಸ ಮಾಡಲು ಚಾಸಾ-1 ಮತ್ತು 5 ಇವರು ನನಗೆ ಸೂಚಿಸಿದ್ದರು.

5. ಘಟನೆ ನಡೆದ ಸ್ಥಳದಲ್ಲಿ ಚಾಸಾ-1, 2 ಮತ್ತು 4 ಹಾಗೂ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಘಟನೆ ನಡೆದ ಸ್ಥಳದಿಂದ ದೊಡ್ಡಬಳ್ಳಾಪುರ -ಯಲಹಂಕ ಮುಖ್ಯ ರಸ್ತೆಯು 1 ಕಿಮೀ ಅಂತರದಲ್ಲಿ ಇದೆ. ಆರೋಪಿತರು ಚಾಸಾ-1 ಮತ್ತು 2 ಇವರಿಗೆ ಸ್ಥಳದಲ್ಲಿ ಯಾಕೆ ಕೆಲಸ ಮಾಡುತ್ತಿದ್ದೀರಿ ಎಂದು ಹಲ್ಲೆ ಮಾಡಿದರು. ನಾನು ಗಲಾಟೆ ಬಿಡಿಸಿರುತ್ತೇನೆ. ಆ ಸಮಯದಲ್ಲಿ ಆರೋಪಿತರು ನನಗೆ ಹಲ್ಲೆ ಮಾಡಿರುವುದಿಲ್ಲ. ಚಾಸಾ-1 ಮತ್ತು 2 ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಕಾರ್ ಸಂಖ್ಯೆ ನನಗೆ ಗೊತ್ತಿಲ್ಲ. ಅದು ನನ್ನ ಪರಿಚಿತರ ಕಾರ್ ಇರುವುದಿಲ್ಲ.

6. ರಾಜಾನುಕುಂಟೆಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ. ಸದರಿ ಸರ್ಕಾರಿ ಆಸ್ಪತ್ರೆಯಿಂದ ಘಟನಾ ಸ್ಥಳವು ಎರಡೂವರೆಯಿಂದ ಮೂರು ಕಿಮೀ ಅಂತರದಲ್ಲಿ ಇರುತ್ತದೆ. ಚಾಸಾ-1 ಮತ್ತು 2 ಇವರನ್ನು ರಾಜಾನುಕುಂಟೆಯಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ರಾಜಾನುಕುಂಟೆಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯ ಇರುವುದಿಲ್ಲ ಎಂದು ಹೇಳುತ್ತಾರೆ. ಮೊದಲು ಚಾಸಾ-1 ಮತ್ತು 2 ರವರನ್ನು ಯಲಹಂಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಘಟನೆ ನಡೆದ ಸ್ಥಳದಿಂದ ಯಲಹಂಕ ಸರ್ಕಾರಿ ಆಸ್ಪತ್ರೆಯು 8-10 ಕಿಮೀ ಅಂತರದಲ್ಲಿ ಇರುತ್ತದೆ. ಯಲಹಂಕ ಸರ್ಕಾರಿ ಆಸ್ಪತ್ರೆಗೆ ಹೋದಾಗ ಚಾಸಾ-1 ಮತ್ತು 2 ಇವರಿಗೆ ಸ್ವಲ್ಪ ಪ್ರಜ್ಞೆ ಇತ್ತು. ಯಲಹಂಕ ಸರ್ಕಾರಿ ಆಸ್ಪತ್ರೆಯಿಂದ ಜಯನಗರ ಆಸ್ಪತ್ರೆಗೆ ಚಾಸಾ-1 ಮತ್ತು 2 ರವರನ್ನು ಸಂಜೆ ಕರೆದುಕೊಂಡು ಹೋಗಿದ್ದೆವು ಆದರೆ ಸಮಯ ನಿಖರವಾಗಿ ಗೊತ್ತಿಲ್ಲ. ಚಾಸಾ-1 ಮತ್ತು 2 ರವರು ಜಯನಗರ ಆಸ್ಪತ್ರೆಯಲ್ಲಿ 2-3 ದಿನ ಇದ್ದರು.

7. ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯಲ್ಲಿ ನಾನು ಸೆಕ್ಯೂರಿಟಿ ಆಗಿ ಯಾವತ್ತೂ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಘಟನೆಯಾಗದೇ ಇದ್ದರೂ ಸಹ ಹಾಗೂ ಘಟನಾ ಸ್ಥಳದಲ್ಲಿ ನಾನು ಇರದೇ ಇದ್ದರೂ ಸಹ ಚಾಸಾ-1 ಮತ್ತು 2 ಇವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಜಾನುಕುಂಟೆ ಪೋಲಿಸ್ ಠಾಣೆಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಜಾತಿ ನಿಂದನೆ ಮಾಡಿಲ್ಲ, ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ಇವುಗಳಿಂದ ಆರೋಪಿತರು ಚಾಸಾ-1 ಮತ್ತು 2 ರವರ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ಇವುಗಳನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 4 ನೇ ಆರೋಪಿ ಪರ ಶ್ರೀಮತಿ ಎಸ್ ಪಿ ವಕೀಲರಿಂದಃ 4 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು